# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1131**
ಸದಸ್ಯರ ಹೆಸರು : ಶ್ರೀ ಎಂ.ಎಲ್.ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : **28.12.2022.**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಇತ್ತೀಚಿನ ಸರ್ಕಾರಿ ಸುತ್ತೋಲೆಗಳನ್ವಯ ವಿವಿಧ ವ್ಯವಸಾಯೇತರ ಉದ್ದೇಶಗಳಿಗೆ ಜಮೀನು ಭೂ ಪರಿವರ್ತನೆಗೆ ಇರುವ ಮಾನದಂಡಗಳೇನು; ಅರ್ಜಿದಾರರು ಅಫಿಡಿವಿಟ್ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರಗಳನ್ನು ನೀಡುವುದು; | ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ/156./ಎಲ್‌ಜಿಪಿ/2020(ಇ) ದಿನಾಂಕ: 21/09/2020 ರಂತೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತಿಸುವ ವಿಧಾನವನ್ನು ಸರಳೀಕರಣಗೊಳಿಸಿ, ಅರ್ಜಿದಾರರು ಭೂ ಪರಿವರ್ತನೆಗೆ https://landrecords.karnataka.gov.in/citizenportal ನಲ್ಲಿ ಲಾಗಿನ್ ಆಗುವ ಮೂಲಕ ಅಫಿಡವಿಟ್ ಆಧಾರಿತ ಭೂ ಪರಿವರ್ತನಾ ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬಹುದಾಗಿ ರುತ್ತದೆ.<br><br>ಅರ್ಜಿದಾರರು ಭೂ ಪರಿವರ್ತನೆಗೆ ಆನ್ ಲೈನ್‌ನಲ್ಲಿ ಚಾಲ್ತಿ ವರ್ಷದ ಪಹಣಿ ಪತ್ರಿಕೆ ಮತ್ತು ಹಕ್ಕು ಬದಲಾವಣೆ ದಾಖಲಾತಿ (ಮ್ಯುಟೇಷನ್ ಪ್ರತಿ) ಹಾಗೂ ಅವಶ್ಯವಿದ್ದಲ್ಲಿ 11ಇ ನಕ್ಷೆ ಸಲ್ಲಿಸಬೇಕಾಗಿರುತ್ತದೆ. |
| ಆ) | ಭೂ ಪರಿವರ್ತನೆ ಕೋರಿ ಸಲ್ಲಿಸುವ ಅರ್ಜಿಗಳಿಗೆ ಭೂ ಪರಿವರ್ತನಾ ಆದೇಶ ನೀಡಲು ಕಾಲಮಿತಿ ನಿಗಧಿಪಡಿಸಲಾಗಿದೆಯೇ; ಭೂ ಪರಿವರ್ತನೆ ಆದೇಶ ನೀಡಲು ಕಾಲಮಿತಿ ನಿಗಧಿಪಡಿಸಿದಲ್ಲಿ ನಿಗಧಿತ ಕಾಲಾವಧಿಯಲ್ಲಿ ಭೂ ಪರಿವರ್ತನೆ ಆದೇಶಗಳನ್ನು ನೀಡಲಾಗುತ್ತಿದೆಯೇ; | ಭೂ ಪರಿವರ್ತನೆಗಾಗಿ ಆನ್ ಲೈನ್ ಮೂಲಕ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಮುಂದಿನ 30 ದಿನಗಳೊಳಗಾಗಿ ಭೂ ಪರಿವರ್ತನಾ ಆದೇಶ/ ಹಿಂಬರಹವನ್ನು ಹೊರಡಿಸಬೇಕಾಗಿರುತ್ತದೆ.<br><br>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಿಗಧಿತ ಕಾಲಮಿತಿಯಲ್ಲಿ ಭೂ ಪರಿವರ್ತನೆ ಆದೇಶ ನೀಡಲಾಗುತ್ತಿರುತ್ತದೆ. |
| ಇ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಭೂ ಪರಿವರ್ತನೆ ಕೋರಿ ದಿನಾಂಕ:01.01.2020 ರಿಂದ ಇಲ್ಲಿಯವರೆಗೂ ಸ್ವೀಕೃತವಾದ ಅರ್ಜಿಗಳೆಷ್ಟು; ತಾಲ್ಲೂಕುವಾರು ಹೋಬಳಿವಾರು ಗ್ರಾಮವಾರು ಸ.ನಂ. ಮತ್ತು ವಿಸ್ತೀರ್ಣವನ್ನು ಯಾವ ಉದ್ದೇಶಕ್ಕಾಗಿ ಎಂಬುದರ ಮಾಹಿತಿಯನ್ನು ಹಾಗೂ ಭೂ ಪರಿವರ್ತನೆಗೆ ಕೋರಿದ ದಿನಾಂಕ ಮತ್ತು ಭೂ ಪರಿವರ್ತನೆ ಆದೇಶ ನೀಡಿದ ದಿನಾಂಕವನ್ನು ನೀಡುವುದು; | ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಭೂ ಪರಿವರ್ತನೆ ಕೋರಿ ದಿನಾಂಕ: 01/01/2020 ರಿಂದ ಇಲ್ಲಿಯವರೆಗೂ ಒಟ್ಟು 5226 ಭೂ ಪರಿವರ್ತನಾ ಅರ್ಜಿಗಳು ಭೂ ಪರಿವರ್ತನಾ ತಂತ್ರಾಂಶದಲ್ಲಿ ಸ್ವೀಕೃತಗೊಂಡಿದ್ದು, ತಾಲ್ಲೂಕುವಾರು ಹೋಬಳಿವಾರು ಗ್ರಾಮವಾರು ಸ.ನಂ ಮತ್ತು ವಿಸ್ತೀರ್ಣವನ್ನು ವಿವರವು ಭೂಮಿ ಡೇಟಾ ಬೇಸ್ ನಲ್ಲಿ ಲಭ್ಯವಿದ್ದು, ಯಾವ ಉದ್ದೇಶಕ್ಕಾಗಿ ಎಂಬುದರ ಮಾಹಿತಿ ಲಭ್ಯ ವಿರುವುದಿಲ್ಲ. ಹಾಗೂ ಭೂ ಪರಿವರ್ತನೆಗೆ ಕೋರಿದ ದಿನಾಂಕ ಮತ್ತು ಭೂ ಪರಿವರ್ತನೆ ಆದೇಶ ನೀಡಿದ ದಿನಾಂಕಗಳ ಪ್ರಕರಣವಾರು ಮಾಹಿತಿಯನ್ನು ಹಾಗೂ ಕೋಲಾರ ಜಿಲ್ಲೆಗೆ ಸಂಬಂಧಿಸಿದ ಮಾಹಿತಿಯನ್ನು ಸಿ.ಡಿ.ಯಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | ಭೂ ಪರಿವರ್ತನೆ ಆದೇಶವನ್ನು ಸರ್ಕಾರ ನಿಗಧಿಪಡಿಸಿದ ಕಾಲಮಿತಿಯೊಳಗೆ ನೀಡದೇ ಇದ್ದಲ್ಲಿ ವಿಳಂಬಕ್ಕೆ ಕಾರಣವಾದ ಅಧಿಕಾರಿ ಮತ್ತು ನೌಕರರ ವಿರುದ್ಧ ಕೈಗೊಂಡ ಕ್ರಮಗಳೇನು; | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಿಗಧಿತ ಕಾಲಮಿತಿಯಲ್ಲಿ ಭೂ ಪರಿವರ್ತನೆ ಆದೇಶ ನೀಡಲಾಗುತ್ತಿರುತ್ತದೆ. |
| ಉ) | ದಿನಾಂಕ:01.01.2020 ರಿಂದ ಇಲ್ಲಿಯವರೆಗೆ ಭೂ ಪರಿವರ್ತನೆ ಕೋರಿರುವ ಅರ್ಜಿಗಳ ಪೈಕಿ ಭೂ ಪರಿವರ್ತನಾ ಆದೇಶ ನೀಡದೇ ವಜಾಗೊಳಿಸಿರುವ ಪ್ರಕರಣಗಳೆಷ್ಟು; ವಜಾಗೊಳ್ಳಲು ಕಾರಣಗಳೇನು? (ಪ್ರಕರಣವಾರು ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ದಿನಾಂಕ: 01/01/2020 ರಿಂದ ಪ್ರಸ್ತುತ ಭೂ ಪರಿವರ್ತನೆಗೆ ಸಲ್ಲಿಸಿರುವ ಅರ್ಜಿಗಳ ಪೈಕಿ ಒಟ್ಟು 2307 ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದ 2710 ಪ್ರಕರಣಗಳನ್ನು ವಜಾಗೊಳಿಸಲಾಗಿರುತ್ತದೆ.<br><br>ಭೂ ಪರಿವರ್ತನಾ ಆನ್‌ಲೈನ್ ತಂತ್ರಾಂಶದಲ್ಲಿ ಈ ಕೆಳಕಂಡ ಅಂಶಗಳನ್ನಾಧರಿಸಿ ಪ್ರಕರಣಗಳನ್ನು ವಜಾಕರಿಸಲು ಅವಕಾಶ ಕಲ್ಪಿಸಿದ್ದು ಅದರಂತೆ ಭೂ ಪರಿವರ್ತನಾ ಪ್ರಕರಣಗಳನ್ನು ವಜಾಗೊಳಿಸಲಾಗಿರುತ್ತದೆ.<br>**1. Purpose of Conversion different than master plan.**<br>**2. Affidavit is not proper.**<br>**3. Spot Check affidavit contradict.**<br>**4. Negative views of Assistant Director Town and Country Planning.**<br>**5. Local Planning Authority has given negative views.**<br>**6. There is no proper road or connectivity to proposed conversion site.**<br>**7. PTCL Act is attracted for this granted land.**<br>**8. Government land grant conditions are violated.**<br>**9. Affidavit is not signed.**<br>**10. Others**<br>ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗೆ ಸಂಬಂಧಿಸಿದಂತೆ ಭೂ ಪರಿವರ್ತನಾ ಪ್ರಕರಣಗಳನ್ನು ವಜಾಗೊಳಿಸಿರುವ ಮಾಹಿತಿಯನ್ನು ಸಿ.ಡಿ.ಯಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಆರ್‌ಡಿ 316 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು